# ತಾಳೆ ಚಪ್ಪರ

ಈ ಚಿತ್ರದಲ್ಲಿ ಕಾಣುವುದು ತಾಳೆ ಮರದ ಹಿಣೆಯ ಚಪ್ಪರ. ಉರಿಬೇಸಿಗೆಗೆ ತಂಪನ್ನು ನೀಡುವ ಈ ಚಪ್ಪರ ಪರಿಸರ ಸ್ನೇಹಿ. ಸಿಮೆಂಟ್ ಸ್ಲೇಪ್‌ನ ಚಪ್ಪರದ ಬದಲು ಇಂತಹ ಪರಿಸರ ಸ್ನೇಹಿ ಚಪ್ಪರವನ್ನು ಹೊನ್ನಾವರದ 'ಇಕೋ ಬೀಚ್'ನಲ್ಲಿ ಕಾಣಬಹುದು.

■ ಮಯೂರ್ ಎಸ್., ಗಂಗೊಳ್ಳಿ





# ಮಾದಲಿಯ ಮೌನೇಶ್ವರ

ಹಬ್ಬ ಹರಿದಿನಗಳಂದು ದೇವಾಲಯಗಳಲ್ಲಿ ದೇವರಿಗೆ ವಿಶೇಷ ಪೂಜೆ ಕೈಕೊಳ್ಳುವ ಸಂಪ್ರದಾಯ ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ದೇವರಿಗೆ ಅಭಿಷೇಕ, ಬುತ್ತಿ ಪೂಜೆ ಮಾಡುವುದು ವಾಡಿಕೆ. ಬುತ್ತಿ ಪೂಜೆಯಲ್ಲಿ ಮೊಸರು, ಹಾಲು, ತುಪ್ಪ ಮತ್ತು ಅನ್ನ ಕಲಸಿ ದೇವರ ಮೂರ್ತಿಗಳನ್ನು ವಿಶೇಷ ರೂಪದಲ್ಲಿ ತಯಾರಿಸಿ ಪೂಜೆ ಸಲ್ಲಿಸುವ ವಿಧಾನ ಇಂದಿಗೂ ಆಚರಣೆಯಲ್ಲಿದೆ. ಬೈಲಹೊಂಗಲದ ಮೌನೇಶ್ವರ ದೇವಾಲಯದಲ್ಲಿ ಮೌನೇಶ್ವರ ಜಯಂತಿ ಅಂಗವಾಗಿ ಮೌನೇಶ್ವರ ಮೂರ್ತಿಯನ್ನು ಗೋದಿ ಹಿಟ್ಟು ಬೆಲ್ಲಗಳಿಂದ ಸಿದ್ಧಪಡಿಸಿದ ಮಾದಲಿಯಿಂದ ಮೂರ್ತಿಯನ್ನು ಮಾಡಿ ಬುತ್ತಿ ಪೂಜೆ ಮಾಡಿದ್ದು ವಿಶೇಷವಾಗಿತ್ತು. ಕಲಾವಿದನ ಕಲಾ ನೈಪುಣ್ಯತೆಯನ್ನು ಚಿತ್ರದಲ್ಲಿ ಕಾಣಬಹುದು. ಮಾದಲಿ, ಗೋಡಂಬಿ, ಬಾಳೆಹಣ್ಣು, ಒಣ ದ್ರಾಕ್ಷಿ ಮುಂತಾದವುಗಳನ್ನು ಬಳಸಿ ಮೂರ್ತಿಗೆ ಮೆರಗು ಬರುವಂತೆ ಮಾಡಲಾಗಿತ್ತು.

■ ಕೆ.ಪಿ. ರಾಮಗುಂಡಿ, ಬೈಲಹೊಂಗಲ

# ಕಾಡು ಅಣಬೆ

ಮಳೆಗಾಲದ ಅವಧಿಯಲ್ಲಿ ಮಲೆನಾಡಿನಲ್ಲಿ ಅರಳಿಕೊಳ್ಳುವ ಅಣಬೆಗಳು ವಿಶಿಷ್ಟವಾಗಿರುತ್ತವೆ. ಕೊಳೆತ ತರೆಗೆಲೆಗಳ ನಡುವೆ ಅಥವಾ ಮರದ ದಿಮ್ಮಿಗಳ ನಡುವೆ ಮಣ್ಣಿನಾಳದಿಂದ ಮೇಲೆದ್ದು ದರ್ಶನ ನೀಡುತ್ತವೆ. ಬಣ್ಣ ಬಣ್ಣದ ರೂಪದಲ್ಲಿ ಕಾಣಸಿಗುವ ಈ ಕಾಡು ಅಣಬೆಗಳು ನೋಡಲು ಆಕರ್ಷಕವಾಗಿರುತ್ತವೆ. ತನ್ನ ವಿನ್ಯಾಸದಿಂದಲೇ ಆಕರ್ಷಿಸುತ್ತವೆ. ಕೆಲ ಗಂಟೆಗಳ ಕಾಲ ಮಾತ್ರ ಆಯುಷ್ಯ ಹೊಂದಿದ ಈ ಅಣಬೆಗಳ ಪೈಕಿ ಕೆಲವು ವಿಷಕಾರಿಯೂ ಇವೆ.

■ ದತ್ತಾತ್ರೇಯ ಭಟ್ಟ ಕಣ್ಣಿಪಾಲ, ವಜ್ರಳ್ಳಿ

